ತಪ್ಪದು’ ಎಂಬ ಶಿವಶರಣರ ಮಾತಿನಂತೆ ಈ ಕಸಬರಿಗೆಯನ್ನು ಕೈಗೆ ಕಟ್ಟಿಕೊಂಡಂದಿನಿಂದ ನಾನೂ ಅದೇ ಆಗಿಹೋಗಿದ್ದೇನೆ. ಹೋದಲ್ಲಿ ಬಂದಲ್ಲಿ ಜೇಡನನು ಕೊಲ್ಲುತ್ತಾ, ಜಿರಳೆಯನು ಅಟ್ಟುತ್ತಾ, ಕುಪ್ಪಳಿಸುತ್ತಾ ಬಂದ ಕಪ್ಪೆಯನು ಎತ್ತಿ ಹೊರಗೆಸೆಯುತ್ತಾ, ಕಪ್ಪೆಯ ಹಿಂದೆ ಬಂದು ಇಣುಕುವ ಕೇರೆಯನ್ನು ಎಬ್ಬುತ್ತಾ, ನೊಣ ಬಂದು ಕೂತಾಗ ಪಟ್ಟ್ ಎಂದು ಬಡಿಯುತ್ತಾ, ಜನ ಬಂದು ಕೂತಾಗ ಥಟ್ಟನೆ ಬೆನ್ನ ಹಿಂದೆ ಅಡಗಿಸುತ್ತಾ, ತಾರಸಿಯ ಬಲೆಗಾಗಿ ಕರದಲೆತ್ತಿ ಹಾರಿ ಝಳಪಿಸುತ್ತಾ, ಬೀಡಾಡಿ ನಾಯಿಯನು ಕಂಡಾಗ ಹಚಹಚ ಎಂದು ಎಡದಿಂದ ಬಲಕ್ಕೋ ಬಲದಿಂದ ಎಡಕ್ಕೋ ಬೀಸುತ್ತಾ, ಕಳ್ಳಬೆಕ್ಕನು ಹೆದರಿಸಲು ನೆಲಕ್ಕೆ ರಪರಪ ಬಡಿಯುತ್ತಾ, ಕೋಪ ಬಂದಿರುವಾಗ ಬರಬರನೆ

